

## ಪರಿಸರಸ್ನೇಹಿ ಕಪ್

ಇತ್ತೀಚೆಗೆ ತೀರ್ಥಹಳ್ಳಿ ತಾಲ್ಲೂಕಿನ ಹಳ್ಳಿ ಹರಳಿಮಠಕ್ಕೆ ನೆಂಟರ ನಿಶ್ಚಿತಾರ್ಥಕ್ಕೆ ಹೋಗಿದ್ದೆ. ಬಂದವರಿಗೆ ಆಸರಿಗೆ ಕುಡಿಯಲು ಕಿತ್ತಳೆ ಹಣ್ಣುಗಳನ್ನು ನಮ್ಮ ಎದುರೇ ಯಂತ್ರಕ್ಕೆ ಹಾಕಿ ಅದರ ಸಿಪ್ಪೆಯನ್ನೇ ಕಪ್‌ನಂತೆ ಮಾಡಿ ಎರಡು ಕಪ್ ಜ್ಯೂಸ್ ತುಂಬಿಕೊಟ್ಟರು. ಪ್ಲಾಸ್ಟಿಕ್ ಕಪ್, ಪೇಪರ್ ಕಪ್ ಬಳಕೆಯ ಈ ಕಾಲದಲ್ಲಿ ಇದೊಂದು ಪರಿಸರಸ್ನೇಹಿ ಕಿತ್ತಳೆ ಕಪ್ ಗಮನಸೆಳೆಯಿತು. ಬಳಸಿದ ಕಪ್‌ಗಳನ್ನು ನೆಂಟರ ತೋಟದ ಅಡಿಕೆ, ತೆಂಗು ಗಿಡಕ್ಕೆ ಗೊಬ್ಬರವಾಗಲು ಬಳಸಿದ್ದು ಖುಷಿ ತಂದಿತು.

–ನಗರ ಗುರುದೇವ್ ಭಂಡಾರ್ಕರ್, ಹೊಸನಗರ



## ಅಟ್ಟಕ್ಕೇರಿದ ಎಣ್ಣೆ ಲಾರಿ!

ಅಡುಗೆ ಎಣ್ಣೆಗಳನ್ನು ಲಾರಿಗಳಲ್ಲಿ ತುಂಬಿಕೊಂಡು ಒಂದು ಜಾಗದಿಂದ ಮತ್ತೊಂದು ಜಾಗಕ್ಕೆ ಸಾಗಿಸುವುದು ಎಲ್ಲರಿಗೂ ಗೊತ್ತಿರುವ ವಿಚಾರವೇ. ಲಾರಿಗಳು ತುಂಬಿಕೊಂಡು ತಂದಿರುವ ಎಣ್ಣೆಗಳನ್ನು ವರ್ತಕರು ದೊಡ್ಡ ಗಾತ್ರದ ಸಂಗ್ರಾಹಕಗಳಿಗೆ ವರ್ಗಾಯಿಸಿ ಅವುಗಳಿಂದ ಗ್ರಾಹಕರಿಗೆ ಎಣ್ಣೆಯನ್ನು ಪೂರೈಕೆ ಮಾಡುತ್ತಾರೆ. ಪ್ರತಿಯೊಂದು ಗೋದಾಮುಗಳಲ್ಲಿ ಇಂತಹ ದೊಡ್ಡ ಗಾತ್ರದ ಎಣ್ಣೆಯ ಸಂಗ್ರಾಹಕಗಳನ್ನು ನೋಡಿದ್ದ ನನಗೆ ಅವುಗಳ ಬದಲಾಗಿ ಎಣ್ಣೆ ತುಂಬಿದ ಲಾರಿಯನ್ನೇ ಬಳಸಿ, ಅದರಿಂದಲೇ ಗ್ರಾಹಕರಿಗೆ ನೇರವಾಗಿ ಎಣ್ಣೆ ಪೂರೈಸುವ ವಿಧಾನ ಕಂಡು ಅಚ್ಚರಿಯಾಯಿತು!

ಎಣ್ಣೆ ತುಂಬಿದ ಲಾರಿಯನ್ನು ನೆಲಮಟ್ಟದಿಂದ ತುಸು ಎತ್ತರಕ್ಕೇರಿಸಿ ಅದರ ಉದರಕ್ಕೆ ಮಾಪಕದ ಯಂತ್ರ ಹಾಗೂ ನಳವನ್ನು ಜೋಡಿಸಿ, ನೇರವಾಗಿ ಗ್ರಾಹಕರಿಗೆ ಎಣ್ಣೆ ಪೂರೈಸಲಾಗುತ್ತಿತ್ತು. ಲಾರಿಯ ಉದರದಲ್ಲಿರುವ ಎಣ್ಣೆ ಖಾಲಿಯಾದ ನಂತರ ಪುನಃ ಅದನ್ನು ರಸ್ತೆಗಿಳಿಸಲಾಗುತ್ತದೆ ಎನ್ನುವ ವರ್ತಕರು ಇದರಿಂದ ಸಮಯ ಹಾಗೂ ಶ್ರಮದ ಉಳಿತಾಯವಾಗುತ್ತದೆ ಎನ್ನುತ್ತಾರೆ. ಅಂದ ಹಾಗೆ ಇಂತಹ ವಿಧಾನವನ್ನು ವಿಜಯನಗರ ಜಿಲ್ಲೆಯ ಹಗರಿಬೊಮ್ಮನಹಳ್ಳಿಯಲ್ಲಿ ನೋಡಬಹುದು.

–ಮಹೇಶ್ವರ ಹುರುಕಡ್ಲಿ ಬಾಚಿಗೊಂಡನಹಳ್ಳಿ

## ವಿಚಿತ್ರ ಸುವರ್ಣಗೆಡ್ಡೆ

ಇದೇನಿದು...? ಈ ಫೋಟೊ ನೋಡಿ ಆಮೆಯ ಮರಿಗಳು ಮನೆಯ ಒಳಗಡೆ ಬಂದು ಕೂತ್ಕೊಂಡಿವೆ ಎಂದು ಯೋಚನೆ ಮಾಡ್ತಾ ಇದ್ದೀರಾ? ಈ ರೀತಿ ನಮಗೆ ನೋಡುವಾಗ ಚಿಕ್ಕ ಚಿಕ್ಕ ಆಮೆ ಮರಿಯಂತೆ ಕಂಡುಬಂದ ವಸ್ತು ನಿಜವಾಗಿಯೂ ಸುವರ್ಣಗೆಡ್ಡೆ. ಇದು ಕಂಡುಬಂದದ್ದು ಹೊರರಾಜ್ಯವಾದ ಗುಜರಾತಿನ ಬರೋಡಾ ನಗರದಲ್ಲಿರುವ ಸುಜಾತ ದಿನಕರ ಶೆಟ್ಟಿ ಅವರ ಮನೆಯಲ್ಲಿ. ಇವರು ತಮ್ಮ ಮನೆಯ ಟೆರೇಸ್‌ನಲ್ಲಿ ಒಂದು ದೊಡ್ಡ ತರಕಾರಿ ಕೈತೋಟವನ್ನೇ ಮಾಡಿದ್ದಾರೆ. ಅಲ್ಲಿ ಹಲವಾರು ತರಕಾರಿಗಳನ್ನು ಬೆಳೆಯುತ್ತಾರೆ. ಹಾಗೆ ಪ್ರತಿವರ್ಷ ಅವರು ಸುವರ್ಣಗೆಡ್ಡೆ ಬೆಳೆಸುತ್ತಾರೆ. ಆರು ಏಳು ತಿಂಗಳ ನಂತರ ಅದನ್ನು ಮಣ್ಣಿನಿಂದ ಅಗೆದು ಗೆಡ್ಡೆಯನ್ನು ತೆಗೆದು ನೋಡಿದಾಗ ಈ ಬಾರಿ ಮಾತ್ರ ಬಹು ವಿಚಿತ್ರವಾದ ಆಮೆ ಮರಿಯನ್ನು ಹೋಲುವ ಎರಡು ಸುವರ್ಣಗೆಡ್ಡೆ ಅವರಿಗೆ ಸಿಕ್ಕಿದೆ. ಅದನ್ನು ಒಂದು ಅಪರೂಪವಾದ ಸಂಗ್ರಹ ವಸ್ತುವಾಗಿ ಅವರು ತಮ್ಮ ಮನೆಯ ಶೋಕೇಸ್‌ನಲ್ಲಿ ಇಟ್ಟಿದ್ದಾರೆ.

–ರತ್ನಾ ಶೆಟ್ಟಿ



## ಚಿತ್ತ ಬದಲಿಸಿದ ಹುತ್ತ!

ಬದಲಾವಣೆ ಜಗದ ನಿಯಮ ಎನ್ನುವ ಮಾತಿದೆ. ಈ ಅಳಿವಿಲ್ಲದ ಮಾತಿಗೆ ಪ್ರಕೃತಿ, ಪ್ರತಿ ಜೀವಿ, ಪ್ರತಿ ಘಟನೆಗಳು ಹೊರತಾಗಿಲ್ಲ. ಇದು ಇಡೀ ಪ್ರಪಂಚಕ್ಕೆ ಅನ್ವಯಿಸುವ ವಾಸ್ತವ. ಇದಕ್ಕೆಲ್ಲ ಪೂರಕ ಎಂಬಂತೆ ಸ್ವಾಭಾವಿಕವಾಗಿ ನಿರ್ಮಾಣವಾಗುವ ಹುತ್ತಕ್ಕಿಂತ ಈ ಹುತ್ತಗಳ ನಿರ್ಮಾಣದಲ್ಲಿ ಬದಲಾವಣೆ ಇದೆ. ವಿಭಿನ್ನವಾದ ಆಕರ್ಷಣೆ ಇದೆ. ಈ ಹುತ್ತಗಳನ್ನು ದಿಟ್ಟಿಸಿದಾಗ ಅವರವರ ಭಾವಕ್ಕೆ, ಅವರವರ ಭಕುತಿಗೆ ಬೇರೆ ಬೇರೆ ತೆರನಾಗಿ ಕಾಣಬಹುದು. ಕರಾವಳಿಯ ಜಟಕನ ಭಕ್ತರಿಗೆ ಜಟಕನ ಮೂರ್ತಿಯಾಗಿ ಕಂಡರೆ, ಒಬ್ಬ ಆರ್ಕಿಟೆಕ್ಚರ್‌ಗೆ ಹೊಸ ವಿನ್ಯಾಸದ ಮನೆಯಾಗಿ, ಭಕ್ತಾದಿಗಳಿಗೆ ದೇವ ಗೋಪುರವಾಗಿ, ಚಾರಣಿಗರಿಗೆ ಶಿಖರವಾಗಿ, ಗೃಹ ವಿನ್ಯಾಸಕರಿಗೆ ಆಕರ್ಷಕ ವಸ್ತುವಾಗಿ ಹೀಗೆ ಹತ್ತು ಹಲವು ಬಗೆಯಲ್ಲಿ ಕಾಣಬಹುದು!



ಇವೆಲ್ಲವುಗಳ ಜೊತೆಗೆ ಈ ರೀತಿ ಹುತ್ತ ನಿರ್ಮಾಣ ಮಾಡಲು ವೈಜ್ಞಾನಿಕವಾದ ಕಾರಣ ಕೂಡ ಇರಬಹುದು. ಅದೇನೇ ಇದ್ದರೂ ನೋಡುಗನಿಗೆ ಮುದ ನೀಡುವ ಈ ಹುತ್ತದ ಮೇಲೆ ಕ್ಯಾಮೆರಾ ಕಣ್ಣು ಬೀಳುವಂತೆ ಮಾಡಿದ ನನ್ನ ಆತ್ಮೀಯ ಗೆಳೆಯ ಹಾಗೂ ಛಾಯಾಗ್ರಾಹಕರಾದ ಶಿರಸಿಯ ರಾಜಾರಾಮ ಹೆಗಡೆಯವರಿಗೆ ಒಂದು ಸಲಾಮ್ ಹೇಳಲೇಬೇಕು.

–ಬೀರಣ್ಣ ನಾಯಕ ಮೊಗಟಾ, ಯಲ್ಲಾಪುರ